# ಕುವೆಂಪು ವಿಶ್ವವಿದ್ಯಾಲಯ

## ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳು

### ಸಭಾ ದಿನಾಂಕ : 28-01-2021

<><><>

**ಪ್ರಾಧಿಕಾರಗಳ ವಿಭಾಗ**

ಜ್ಞಾನಸಹ್ಯಾದ್ರಿ, ಶಂಕರಘಟ್ಟ 577 451

ಶಿವಮೊಗ್ಗ ಜಿಲ್ಲೆ.

ಫ್ಯಾಕ್ಸ್: 08282-256262
ಇ-ಮೇಲ್ : drsyndicateku@gmail.com
☎08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-1:ಎಸಿ.01-21: 538 :2020-21 ದಿನಾಂಕ:18-02-2021 19

ಮಾನ್ಯರೆ,

**ವಿಷಯ: ದಿನಾಂಕ:28-01-2021ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.**

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ-2000ರ ಪ್ರಕರಣ-31(xviii) ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIರ ಪ್ರಕರಣ- 17ರನ್ವಯ ದಿನಾಂಕ:28-01-2021ರಂದು ವಿಶ್ವವಿದ್ಯಾಲಯದ **ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್** ಸಭಾಂಗಣದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIರ ಪ್ರಕರಣ-17ರ ಕಂಡಿಕೆ (2) ರ ಪ್ರಕಾರ ಸದರಿ ನಡಾವಳಿಗಳನ್ನು ಕಳುಹಿಸಿದ 21 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

***ವಿ.ಸೂ: ಸದರಿ ನಡಾವಳಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥವತ್ತಾಗಿ ಪ್ರಕಟಿಸಲಾಗಿದೆ.***

ತಮ್ಮ ವಿಶ್ವಾಸಿ,

(ಪ್ರೊ. ಎಸ್.ಎಸ್. ಪಾಟೀಲ್)
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ.

ಪ್ರತಿಗಳು:-

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು,ಐ,ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ***ನಿರ್ದೇಶಕರು/ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.***
10) ಎಲ್ಲಾ ಅಧ್ಯಕ್ಷರು / ಸಂಚಾಲಕರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು./ ಚಿಕ್ಕಮಗಳೂರು
11) ಎಲ್ಲಾ ಉಪಕುಲಸಚಿವರು./ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ ಶಿವಮೊಗ್ಗ.
13) ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಚಿಕ್ಕಮಗಳೂರು. ಕುವೆಂಪು ವಿಶ್ವವಿದ್ಯಾಲಯ
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾಲಯ ಇಂಜಿನಿಯರಿಂಗ್ ವಿಭಾಗ, ವಿಶ್ವವಿದ್ಯಾಲಯ, ಶಂಕರಘಟ್ಟ.
18) ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
19) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
20) ಕಛೇರಿ ಪ್ರತಿ.

J:VISHWA-UAT-1:AC-PRO-COV-LTR

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:28-01-2021 ರಂದು ಗುರುವಾರ ಪೂರ್ವಾಹ್ನ 11.00 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ "ಸಿಂಡಿಕೇಟ್ ಸಭಾಂಗಣ"ದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಿದ್ದ ಸದಸ್ಯರು :**

| | | |
|---|---|---|
| 1. | ಪ್ರೊ. ಬಿ.ಪಿ ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಎಸ್.ಎಸ್. ಪಾಟೀಲ್ ಕುಲಸಚಿವರು | ಸದಸ್ಯ ಕಾರ್ಯದರ್ಶಿ |
| 3. | ಪ್ರೊ. ಪಿ. ಕಣ್ಣನ್, ಕುಲಸಚಿವರು(ಮೌಲ್ಯಮಾಪನ) | ಸದಸ್ಯರು |
| 4. | ಡಾ. ಹೆಚ್. ರಾಜೇಶ್ವರಿ ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ಕೆ. ವಿ. ಸತೀಶ್ ಪೈ ಪ್ರಾಂಶುಪಾಲರು | ಸದಸ್ಯರು |
| 6. | ಡಾ. ವಿಷ್ಣುಮೂರ್ತಿ ಕೆ.ಎ. ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ರಾಜಶೇಖರ ಪಿ.ಬಿ. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀಮತಿ ಭಾರತಿ ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ನಟೇಶ ಎಸ್. ಎಂ. ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಬಿ. ಸಿ. ಬಸವರಾಜಪ್ಪ ಪ್ರಾಂಶುಪಾಲರು | ಸದಸ್ಯರು |
| 11. | ಶ್ರೀ ಮಹಾಲಿಂಗಪ್ಪ ಈ. ಪ್ರಾಂಶುಪಾಲರು | ಸದಸ್ಯರು |
| 12. | ಡಾ. ರಾಮಚಂದ್ರ ದೇವರು ಹೆಗಡೆ ಪ್ರಾಂಶುಪಾಲರು | ಸದಸ್ಯರು |
| 13. | ಶ್ರೀ ಜಿ. ಬಿ. ಪವನ್ | ಸದಸ್ಯರು |
| 14. | ಶ್ರೀ ಅನಿಲ್‌ಕುಮಾರ್ ಆರ್. | ಸದಸ್ಯರು |
| 15. | ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ ಪ್ರಾಧ್ಯಾಪಕರು | ಸದಸ್ಯರು |
| 16. | ಪ್ರೊ. ರಾಮಚಂದ್ರ ವೈ.ಎಲ್. ಪ್ರಾಧ್ಯಾಪಕರು | ಸದಸ್ಯರು |
| 17. | ಪ್ರೊ. ವೈ.ಎಲ್.ಕೃಷ್ಣಮೂರ್ತಿ ಪ್ರಾಧ್ಯಾಪಕರು | ಸದಸ್ಯರು |
| 18. | ಪ್ರೊ. ರಾಜಾನಾಯಕ ಪ್ರಾಧ್ಯಾಪಕರು | ಸದಸ್ಯರು |
| 19. | ಪ್ರೊ. ರೇಚಲ್ ಕುರಿಯನ್ ಪ್ರಾಧ್ಯಾಪಕರು | ಸದಸ್ಯರು |
| 20. | ಪ್ರೊ. ಜಯರಾಮ್ ಭಟ್. ಡೀನರು, ಕಲಾನಿಕಾಯ | ಸದಸ್ಯರು |
| 21. | ಪ್ರೊ. ಕೃಷ್ಣ ವಿ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ | ಸದಸ್ಯರು |
| 22. | ಪ್ರೊ. ಹೆಚ್.ಎನ್. ರಮೇಶ್, ವಾಣಿಜ್ಯ ನಿಕಾಯದ ಡೀನರು, | ಸದಸ್ಯರು |
| 23. | ಡಾ. ಗೀತಾ ಸಿ., ಶಿಕ್ಷಣ ನಿಕಾಯ ಡೀನರು, | ಸದಸ್ಯರು |
| 24. | ಡಾ. ಆರ್.ಹೆಚ್. ವಾಲ್ಮೀಕಿ ಗ್ರಂಥಪಾಲಕರು, (ಪ್ರಭಾರ) | ಸದಸ್ಯರು |
| 25. | ಪ್ರೊ. ಹೆಚ್.ಎಸ್. ಜಯಣ್ಣ, ನಿರ್ದೇಶಕರು ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ, | ಸದಸ್ಯರು |
| 26. | ಡಾ. ನಾಗರಾಜ. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಪರಿಷತ್, | ಸದಸ್ಯರು |
| 27. | ಪ್ರೊ. ಗುರುಲಿಂಗಯ್ಯ ಎಂ., ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ | ಸದಸ್ಯರು |
| 28. | ಡಾ. ಎನ್.ಡಿ. ವಿರೂಪಾಕ್ಷ (ಪ್ರಭಾರ), ನಿರ್ದೇಶಕರು, ದೈಹಿಕ ಶಿಕ್ಷಣ | ಸದಸ್ಯರು |
| 29. | ಶ್ರೀ ಎಸ್. ರಾಮಕೃಷ್ಣ , ಹಣಕಾಸು ಅಧಿಕಾರಿಗಳು | ಸದಸ್ಯರು |
| 30. | ಪ್ರೊ, ಯೋಗೀಶ್ ಎಸ್.ಎನ್. ನಿರ್ದೇಶಕರು ದೂರ ಶಿಕ್ಷಣ ನಿರ್ದೇಶನಾಲಯ | ವಿಶೇಷ ಆಹ್ವಾನಿತರು |

**ಗೈರು ಹಾಜರಾದ ಸದಸ್ಯರು :**

| | | |
|---|---|---|
| 1. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 2. | ಶ್ರೀ ಕೆ.ಸಿ. ವೀರಭದ್ರಯ್ಯ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಪ್ರತಿನಿಧಿ | ಸದಸ್ಯರು |
| 3. | ಶ್ರೀ ಎಸ್.ಎಲ್. ಭೋಜೇಗೌಡ, ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 4. | ಶ್ರೀ ಎಸ್. ರುದ್ರೇಗೌಡ, ವಿಧಾನ ಪರಿಷತ್ ಸದಸ್ಯರು, ಶಿವಮೊಗ್ಗ | ಸದಸ್ಯರು |
| 5. | ಶ್ರೀ ಬಿ.ಆರ್. ಲೋಹಿತಾಕ್ಷ | ಸದಸ್ಯರು |
| 6. | ಡಾ. ಎಂ. ಸ್ವಾಮಿ ಪ್ರಾಂಶುಪಾಲರು | ಸದಸ್ಯರು |
| 7. | ಪ್ರೊ, ಅಶ್ಫಕ್ ಅಹಮದ್ ನಿರ್ದೇಶಕರು ಐ.ಕ್ಯೂ.ಎ.ಸಿ | ವಿಶೇಷ ಆಹ್ವಾನಿತರು |

**ಪ್ರಸ್ತಾವನೆ:**

ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರಿಗೆ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕುವೆಂಪು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ತಿಗೆ ನೂತನವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ರನ್ವಯ ನಾಮ ನಿರ್ದೇಶಿಸಲ್ಪಟ್ಟ ಕಲಾ ನಿಕಾಯದ ಡೀನರಾದ ಪ್ರೊ. ಜಯರಾಮ್ ಭಟ್ ಬಿ. ಹಾಗೂ ಪ್ರೊ.ಹೆಚ್.ಎಸ್. ಜಯಣ್ಣ, ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ ಕುವೆಂಪು ವಿಶ್ವವಿದ್ಯಾಲಯ, ಪ್ರೊ. ಅಶ್ಫಕ್ ಅಹಮದ್, ನಿರ್ದೇಶಕರು ಐ.ಕ್ಯೂ.ಎ.ಸಿ. ಹಾಗೂ ವಿಶೇಷ ಆಹ್ವಾನಿತರು, ಹಾಗೂ ಜೇಷ್ಠತೆಯ ಆಧಾರದ ಮೇಲೆ ನಾಮನಿರ್ದೇಶನಗೊಂಡ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರುಗಳಾದ ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ, ಶ್ರೀ ಕೆ.ವಿ. ಸತೀಶ್ ಪೈ ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಳೇಬೈಲು, ತೀರ್ಥಹಳ್ಳಿ, ಡಾ. ವಿಷ್ಣುಮೂರ್ತಿ ಕೆ.ಎ. ಸರ್.ಎಂ.ವಿ. ವಿಜ್ಞಾನ ಸರ್ಕಾರಿ ಕಾಲೇಜು, ಬೊಮ್ಮನಕಟ್ಟೆ, ಭದ್ರಾವತಿ, ಶ್ರೀ ರಾಜಶೇಖರ ಪಿ.ಬಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪಂಚನಹಳ್ಳಿ, ಶ್ರೀಮತಿ ಭಾರತಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶೃಂಗೇರಿ. ಶ್ರೀ ನಟೇಶ ಎಸ್. ಎಂ. ಸರ್ಕಾರಿ ಮಹಿಳಾ ಕಾಲೇಜು ಚಿಕ್ಕಮಗಳೂರು., ಶ್ರೀ ಬಿ. ಸಿ. ಬಸವರಾಜಪ್ಪ. ಡಿ.ಎಸ್.ಬಿ.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೂಡಿಗೆರೆ., ಶ್ರೀ ಮಹಾಲಿಂಗಪ್ಪ ಈ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅಜ್ಜಂಪುರ, ಡಾ. ಎಂ. ಸ್ವಾಮಿ, ಶ್ರೀ ಜೆ.ಸಿ.ಬಿ.ಎಂ. ಕಾಲೇಜು ಶೃಂಗೇರಿ, ಡಾ. ರಾಮಚಂದ್ರ ದೇವರು ಹೆಗ್ಡೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಆಯನೂರು ಇವರುಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಗೆ ಪರಿಚಯಿಸಲಾಯಿತು.

ನಂತರ ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಮುಂದುವರೆದು, ಮಾನ್ಯ ಕುಲಪತಿಗಳು, ಗ್ರಾಮ ಪಂಚಾಯತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸಿಂಡಿಕೇಟ್ ವಿದ್ಯಾವಿಷಯಕ ಪರಿಷತ್ ಸಭೆಯನ್ನು ನಿಗದಿತ ಸಮಯದಲ್ಲಿ ಏರ್ಪಡಿಸಲು ಸಾಧ್ಯವಾಗಿರುವುದಿಲ್ಲವೆಂದರು.

ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳು ಕೈಜೋಡಿಸಿ ಪ್ರಸ್ತುತ ವಿಶ್ವವಿದ್ಯಾಲಯವು 73ನೇ ಸ್ಥಾನದಲ್ಲಿರುವ ಎನ್.ಐ.ಆರ್.ಎಫ್ ರ್‍ಯಾಂಕಿಂಗನ್ನು 37 ಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸೋಣ ಎಂದರು. ಹಾಗೂ ಮುಂದಿನ ಶೈಕ್ಷಣಿಕ ವರ್ಷದಿಂದ ಸ್ನಾತಕ ಮತ್ತು ಸ್ನಾತಕೋತ್ತರ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಕ್ಕೆ ಪೂರಕವಾಗುವಂತಹ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಲಾಗುವುದು ಎಂದರು.

ನಂತರ ಕಾರ್ಯಸೂಚಿಯಲ್ಲಿರುವಂತೆ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

**2021:ಎಸಿ–1.01:** ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ರನ್ವಯ ಘನತೆವೆತ್ತ ಕುಲಾಧಿಪತಿಗಳಿಂದ ಅಂಕಿತಗೊಂಡಿರುವ ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳಿಗೆ ಸಂಬಂಧಿಸಿದ ವರದಿ.

**ನಿರ್ಣಯ:** ಯಾವುದೂ ಇರುವುದಿಲ್ಲ.

**2021:ಎಸಿ–1.02:** ಕಾರ್ಯಸೂಚಿಯಲ್ಲಿ ಸೂಚಿಸಲಾಗಿರುವ ಕಾರ್ಯಕಲಾಪದ ಕ್ರಮದಲ್ಲಿ ಬದಲಾವಣೆಗಾಗಿ ಯಾವುದೇ ಗೊತ್ತುವಳಿ ಮಂಡಿಸುವುದು.

**ನಿರ್ಣಯ:** ಯಾವುದೂ ಇರುವುದಿಲ್ಲ

**2021:ಎಸಿ–1.03:** ಮಾನ್ಯ ಕುಲಪತಿಗಳು ಅಥವಾ ಸಿಂಡಿಕೇಟ್ ಮಂಡಿಸಿದ ವಿಷಯಗಳು.

**ನಿರ್ಣಯ:** ಯಾವುದೂ ಇರುವುದಿಲ್ಲ

## ಪ್ರಾಧಿಕಾರಗಳ ವಿಭಾಗ

**2021:ಎಸಿ-1.04:** ದಿನಾಂಕ:12-08-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಮಾತನಾಡುತ್ತಾ ನಡಾವಳಿಯ ವಿಷಯ ಸಂಖ್ಯೆ 1,09(ಸಿ)ಯ ನಿರ್ಣಯದಲ್ಲಿ ಹುದ್ದೆಗಳ ಸೃಜನೆಗಾಗಿ ಪರಿನಿಯಮವನ್ನು ರಚಿಸಲು ಚರ್ಚಿಸಲಾಗಿತ್ತು. ಆದರೆ ಅದು ನಡಾವಳಿಯಲ್ಲಿ ದಾಖಲಾಗಿರುವುದಿಲ್ಲ ಎಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಸದರಿ ಪರಿನಿಯಮವು ಪರಿನಿಯಮಗಳ ಸ್ಥಾಯಿ ಸಮಿತಿಯು ಪರಿಶೀಲಿಸಿ ಪುನ: ಸಿದ್ದಪಡಿಸಿ ಇಂದಿನ ಸಭೆಯಲ್ಲಿ ಮಂಡಿಸಿದ್ದು ಆ ವಿಷಯ ಬಂದಾಗ ಚರ್ಚಿಸಬಹುದೆಂದರು.

ಸದಸ್ಯರಾದ ಶ್ರೀ ಪವನ್‌ರವರು ಮಾತನಾಡುತ್ತಾ ವಿಷಯ ಸಂಖ್ಯೆ 1.16 ರಲ್ಲಿ ನಾನು ಪ್ರಸ್ತಾಪಿಸಿದ ವಿಷಯವನ್ನು ಪರಿಗಣಿಸಿರುವುದಿಲ್ಲವೆಂದು ತಮ್ಮ ಆಕ್ಷೇಪಣೆ ತಿಳಿಸಿದರು. ಚಿಕ್ಕಮಗಳೂರು ಸ್ನಾತಕೋತ್ತರ ಕೇಂದ್ರಕ್ಕೆ ಹಣ ಮೀಸಲಿಡುವುದರ ಬಗ್ಗೆ ನಿರ್ಣಯದಲ್ಲಿ ಹಾಗೂ ಆಯ-ವ್ಯಯದಲ್ಲಿ ನಿಗದಿಪಡಿಸದೇ ಇರುವುದನ್ನು ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಕುಲಪತಿಗಳು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಹಣಕಾಸಿನ ಪರಿಸ್ಥಿತಿಯು ಪೂರಕವಾಗಿರುವುದಿಲ್ಲವಾದ್ದರಿಂದ ಮುಂದಿನ ಆಯ-ವ್ಯಯದಲ್ಲಿ ಪರಿಗಣಿಸಲಾಗುವುದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಶ್ರೀ ಪವನ್‌ರವರು ನಾನು ಕನಿಷ್ಠ 10 ಕೋಟಿಯನ್ನು ನಿಗದಿಪಡಿಸಲು ಕೋರಿದ್ದು ಅದರಲ್ಲಿ ಸ್ವಲ್ಪ ಪ್ರಮಾಣದ ಹಣವನ್ನಾದರೂ ಮೀಸಲಿಡುವಂತೆ ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಹಣಕಾಸು ಅಧಿಕಾರಿಗಳು ಪ್ರಸ್ತುತ ವರ್ಷ ದೂರಶಿಕ್ಷಣದ ಪ್ರವೇಶಾತಿಯು ಇಲ್ಲದಿರುವುದರಿಂದ, ವಿಶ್ವವಿದ್ಯಾಲಯದಲ್ಲಿ ವೇತನ ಮತ್ತು ಭತ್ಯೆಗಳಿಗೆ ಮಾತ್ರ ಸರ್ಕಾರವು ಅನುದಾನ ಒದಗಿಸುತ್ತಿರುವುದರಿಂದ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಹಣದ ಕೊರತೆ ಇದೆ ಎಂದರು ಅಲ್ಲದೇ ಆಂತರಿಕ ಸಂಪನ್ಮೂಲದ ಕೊರತೆಯಿರುವುದನ್ನು ಸದಸ್ಯರ ಗಮನಕ್ಕೆ ತಂದರು. ಮಾನ್ಯ ಕುಲಪತಿಗಳು ಮಾತನಾಡುತ್ತಾ ಮುಂದಿನ ಆಯ-ವ್ಯಯದಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಮೀಸಲಿಡಲಾಗುವುದು ಎಂದರು. ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಮಾತನಾಡುತ್ತಾ ಸದರಿ ನಿರ್ಣಯದಲ್ಲಿ ಸರ್ಕಾರದಿಂದ ಅನುಮತಿ ಪಡೆಯಬೇಕು ಎಂಬುದನ್ನು ಸೇರಿಸಬೇಕು ಎಂದರು. ಇದಕ್ಕೆ ಸಭೆಯು ಸಮ್ಮತಿಸಿ ನಂತರ ನಡಾವಳಿಯನ್ನು ದೃಢೀಕರಿಸಿತು.

**2021:ಎಸಿ-1.05:** ದಿನಾಂಕ:15-10-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:15-10-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

**2021:ಎಸಿ-1.06:** ದಿನಾಂಕ:23-07-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:23-07-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಮಿತಿ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು.

**2021:ಎಸಿ-1.07:** ಹಣಕಾಸು ಸಮಿತಿಗೆ ವಿದ್ಯಾವಿಷಯಕ ಪರಿಷತ್ತಿನಿಂದ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.

**ನಿರ್ಣಯ:** ವಿದ್ಯಾವಿಷಯಕ ಪರಿಷತ್ತಿನಿಂದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್, - ಇವರನ್ನು ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡಲು ಸಭೆಯು ಅನುಮೋದಿಸಿತು. ನಂತರ ಮಾನ್ಯ ಕುಲಪತಿಗಳು ಹಣಕಾಸು ಸಮಿತಿಯ ನೂತನ ಸದಸ್ಯರಾಗಿ ಆಯ್ಕೆಯಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್, - ಇವರನ್ನು ಅಭಿನಂದಿಸಿದರು.

**2021:ಎಸಿ-1.08:** 2019-20ನೇ ಆರ್ಥಿಕ ಸಾಲಿನ 32ನೇ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು.

**ಚರ್ಚೆ:** ಕುಲಸಚಿವರು 2019-20ನೇ ಆರ್ಥಿಕ ಸಾಲಿನ 32ನೇ ವಾರ್ಷಿಕ ವರದಿಯನ್ನು ಸಭೆಗೆ ಮಂಡಿಸುತ್ತಾ ಅನುಮೋದನೆಯನ್ನು ಕೋರಿದರು. ಈ ಕುರಿತಂತೆ ವಾರ್ಷಿಕ ವರದಿ ಸಂಪಾದಕ ಮಂಡಳಿ ಅಧ್ಯಕ್ಷರಾದ ಪ್ರೊ. ವಿ. ಕೃಷ್ಣ ರವರು ವಾರ್ಷಿಕ ವರದಿಯಲ್ಲಿನ ಅಂಶಗಳ ಕುರಿತು ಸಭೆಗೆ ವಿವರಿಸುತ್ತಾ ವಿಭಾಗಗಳ ಎಲ್ಲಾ ಮಾಹಿತಿಗಳನ್ನು ಕ್ರೋಢೀಕರಿಸಿ ವಾರ್ಷಿಕ ವರದಿಯನ್ನು ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ:** ಚರ್ಚೆಯ ನಂತರ 2019-20ನೇ ಆರ್ಥಿಕ ಸಾಲಿನ 32ನೇ ವಾರ್ಷಿಕ ವರದಿಯನ್ನು ಸಭೆಯು ಅನುಮೋದಿಸಿತು.

**2021:ಎಸಿ-1.09:** "Statutes Governing the Affiliation of Colleges/ Institutions under the jurisdiction of Kuvempu University, 2019 (Framed under Section 59 read with Sections 40(g) and 41 of the Karnataka State Universities Act 2000)" ಪರಿನಿಯಮದ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ, ಸದರಿ ಪರಿನಿಯಮದಲ್ಲಿ ಯು.ಜಿ.ಸಿ ಹಾಗೂ ಸರ್ಕಾರದ ಮಾರ್ಗ ಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ ಎಂದರು. ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರಾದ ಪ್ರೊ. ನಾಗರಾಜ್‌ರವರು ಪರಿನಿಯಮದ ಅಂಶಗಳ ಕುರಿತು ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

ಸದಸ್ಯರಾದ ಡಾ. ಗೀತಾ ಸಿ, ರವರು ಮಾತನಾಡುತ್ತಾ ಸಂಯೋಜನಾ ತಂತ್ರಾಂಶವು ಬಿ,ಇಡಿ. ಕಾಲೇಜುಗಳಿಗೆ ಪೂರಕವಾಗಿರುವುದಿಲ್ಲವೆಂದು ತಿಳಿಸುತ್ತಾ ಈ ಕುರಿತು ಸೂಕ್ತ ಮಾರ್ಪಾಡುಗಳು ಅವಶ್ಯವಿರುತ್ತದೆ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ-1.10:** "Statutes relating to direct recruitment and career advancement scheme and miscellaneous provisions to implement the revised UGC pay scales to Teachers, Librarians, Physical Education and Equivalent cadre personnel of kuvempu university." ಪರಿನಿಯಮದ ಅನುಮೋದನೆ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ 7ನೇ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸಿ ನೀಡಿರುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶವನ್ನು ಯಥಾವತ್ತಾಗಿ ಪರಿನಿಯಮದ ರೂಪದಲ್ಲಿ ಸಿದ್ದಪಡಿಸಿ ಮಂಡಿಸಲಾಗಿದೆ ಎಂದರು. ಹಾಗೂ ಈ ಹಿಂದೆ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿ ಸರ್ಕಾರದಿಂದ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿದ್ದು ಸದರಿ ತಿದ್ದುಪಡಿಯನ್ನು ಪರಿನಿಯಮದ ಸ್ಥಾಯಿ ಸಮಿತಿಯು ಪರಿಶೀಲಿಸಿ ಪರಿಷ್ಕೃತ ಪರಿನಿಯಮವನ್ನು ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು. ಅಲ್ಲದೇ ಪರಿನಿಯಮವನ್ನು ಸಲ್ಲಿಸದಿದ್ದಲ್ಲಿ ಅಧ್ಯಾಪಕರ ವೇತನಾನುದಾನವನ್ನು ಸ್ಥಗಿತಗೊಳಿಸಲಾಗುವುದು ಎಂದು ಸರ್ಕಾರದಿಂದ ಪತ್ರ ಬಂದಿರುವುದಾಗಿಯೂ ಸಭೆಯ ಗಮನಕ್ಕೆ ತಂದರು.

ಸದಸ್ಯರಾದ ಡಾ.ಎನ್.ಡಿ.ವಿರೂಪಾಕ್ಷ ಇವರು ಮಾತನಾಡುತ್ತಾ, ಪರಿನಿಯಮದ ಪುಟಸಂಖ್ಯೆ 26 ರ ಕಂಡಿಕೆ 18 ರಲ್ಲಿ ದೈಹಿಕ ಶಿಕ್ಷಣ ಅಧ್ಯಾಪಕರ ಪದನಾಮವು ಬಿಟ್ಟುಹೋಗಿರುವುದನ್ನು ಸೇರ್ಪಡೆ ಮಾಡುವಂತೆ ಕೋರಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಪರಿನಿಯಮದಲ್ಲಿ ಪುಟಸಂಖ್ಯೆ 26 ರ ಕಂಡಿಕೆ 18 ನ್ನು CAREER ADVANCEMENT SCHEME FOR UNIVERSITY AND CONSTITUENT COLLEGE TEACHERS, LIBRARIANS PHYSICAL EDUCATION PERSONEL AND EQUIVALENT CADRES ಎಂದು ಪರಿಷ್ಕರಿಸಿ ಉಳಿದಂತೆ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ–1.11:** Statute Governing the Establishment of a Centre for Women studies in kuvempu University ಪರಿನಿಯಮದ ಅನುಮೋದನೆ ಕುರಿತು.

**ಚರ್ಚೆ:** ವಿಷಯವನ್ನು ಪ್ರಸ್ತಾಪಿಸಿದ ಕುಲಸಚಿವರು ವಿಶ್ವವಿದ್ಯಾಲಯದಲ್ಲಿ ಯು.ಜಿ.ಸಿ. ಮಾರ್ಗಸೂಚಿಯಂತೆ ಮಹಿಳಾ ಅಧ್ಯಯನ ಕೇಂದ್ರವು ಸ್ಥಾಪನೆಯಾಗಿ ಕಾರ್ಯಾರಂಭ ಮಾಡುತ್ತಿದ್ದು ಇದಕ್ಕೆ ಇದುವರೆಗೂ ಪರಿನಿಯಮವನ್ನು ರಚಿಸಿಲ್ಲವಾದ್ದರಿಂದ ಪರಿನಿಮವನ್ನು ಪರಿನಿಯಮಗಳ ಸ್ಥಾಯಿ ಸಮಿತಿಯು ಸಿದ್ಧಪಡಿಸಿ ನೀಡಿದ್ದು ಇದನ್ನು ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ಜಿ.ಬಿ.ಪವನ್ ರವರು ಮಾತನಾಡುತ್ತಾ ಈ ಕೇಂದ್ರದ ಸಲಹಾ ಸಮಿತಿಗೆ ಸಮಾಜದಲ್ಲಿನ ವಿಧವಾ ಮಹಿಳೆಯೊಬ್ಬರನ್ನು ಸೇರಿಸುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ಕುಲಪತಿಗಳು ಅವಕಾಶವಿದ್ದಲ್ಲಿ ಪರಿಶೀಲಿಸಲಾಗುವುದು ಎಂದರು. ಸದಸ್ಯರಾದ ಪ್ರೊ. ರೇಚಲ್ ಕುರಿಯನ್ ಇವರು ಮಾತನಾಡುತ್ತಾ ಈ ಮಹಿಳಾ ಕೇಂದ್ರಕ್ಕೆ ಯು.ಜಿ.ಸಿ. ನಿಯಮದನ್ವಯ ಅಧ್ಯಾಪಕರ ಹುದ್ದೆಗಳನ್ನು ಸೃಜಿಸಲು ಪರಿನಿಯಮದಲ್ಲಿ ಸೇರಿಸುವುದು ಸೂಕ್ತವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪರಿನಿಯಮಗಳ ಸ್ಥಾಯಿ ಸಮಿತಿಯ ಅಧ್ಯಕ್ಷರು ಪರಿನಿಯಮವನ್ನು ಮತ್ತೊಮ್ಮೆ ಪರಿಶೀಲಿಸಿ ಇದರಲ್ಲಿ ಅಧ್ಯಾಪಕರ ಹುದ್ದೆಗಳನ್ನು ಸೇರ್ಪಡೆಗೊಳಿಸಲು ಅವಕಾಶವಿದ್ದಲ್ಲಿ ಸೇರಿಸಿ ಮತ್ತೊಮ್ಮೆ ಮಂಡಿಸಲು ನಿರ್ಣಯಿಸಲಾಯಿತು.

**2021:ಎಸಿ–1.12:** Statute relating to the establishment of Prasaranga and institution of Director, Deputy Director, Superintendent and ministerial posts in Prasaranga of Kuvempu University Jnana sahyadri Shankaraghatta -2021 ಪರಿನಿಯಮದ ಅನುಮೋದನೆ ಕುರಿತು.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯವು ಪ್ರಾರಂಭವಾದಂದಿನಿಂದ ಪ್ರಸಾರಾಂಗವು ಸ್ಥಾಪನೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದು ನಿಯಮಾನುಸಾರ ಪರಿನಿಯಮಗಳನ್ವಯ ಸ್ಥಾಪನೆಯಾಗದೇ ಇರುವುದರಿಂದ ಪರಿನಿಯಮ ಸ್ಥಾಯಿ ಸಮಿತಿಯು ಸಿದ್ಧಪಡಿಸಿರುವ ಪರಿನಿಯಮವನ್ನು ಸಭೆಯು ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿರುವುದಾಗಿ ತಿಳಿಸಿದರು. ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ರೇಚಲ್ ಕುರಿಯನ್ ರವರು ಮಾತನಾಡಿ ಪರಿನಿಯಮದಲ್ಲಿ ಯಾವುದಾದರೂ ಬದಲಾವಣೆಗಳಿದ್ದಲ್ಲಿ ಅದನ್ನು ಸದಸ್ಯರು ಮುಕ್ತವಾಗಿ ತಿಳಿಸಬಹುದು ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಪರಿನಿಯಮದಲ್ಲಿ ಕೆಲವು ಸಣ್ಣ ಪುಟ್ಟ ವ್ಯಾಕರಣಗಳ ತಪ್ಪುಗಳಿರುವುದನ್ನು ಸರಿಪಡಿಸಿ ಮತ್ತೊಮ್ಮೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಿ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ–1.13:** Statutes relating to upgradation of posts of Pump Operator person to the incumbent as Senior Pump Operator in the maintenance section of Engineering division of Kuvempu University-2021 ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ: ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ, upgradation of posts of Pump Operator person to the incumbent as Senior Pump Operator ಪರಿನಿಯಮದ ಕುರಿತು ಅನುಮೋದನೆ ಕೋರಿದರು. ಪರಿನಿಯಮಗಳ ರಚನೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಪ್ರೊ. ವಿ. ಕೃಷ್ಣರವರು ಪರಿನಿಯಮದಲ್ಲಿ ಅಳವಡಿಸಲಾದ ಅಂಶಗಳ ಕುರಿತು ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ತಾಂತ್ರಿಕ ಹುದ್ದೆಗಳಿಗೆ ಬಡ್ತಿಗೆ ಅವಕಾಶ ಇರುವುದಿಲ್ಲ ಎಂದರು.

ಮುಂದುವರೆದಂತೆ ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡುತ್ತಾ ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರುಗಳನ್ನು ಸೇವೆಯಲ್ಲಿ ವಿಲೀನೀಕರಣಗೊಳಿಸುವ ಪರಿನಿಯಮವನ್ನೂ ಸಹ ಸಿದ್ದಪಡಿಸಿ ಮಂಡಿಸುವುದು ಸೂಕ್ತ ಎಂದರು. ಪ್ರೊ. ವಿ. ಕೃಷ್ಣರವರು ಮಾತನಾಡಿ ಪರಿನಿಯಮಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಕ್ರೋಢೀಕರಿಸುತ್ತಿದ್ದು ಪರಿನಿಯಮ ರಚನೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ ಎಂದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ–1.14:** Statutes relating to creation of Medical, Para medical and ministerial posts in the Kuvempu University Health centre, Jnana Sahyadri Shankaraghatta-2021 ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ: ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಹುದ್ದೆಗಳನ್ನು ಸೃಜಿಸುವ ಪರಿನಿಯಮದ ಕುರಿತು ಅನುಮೋದನೆ ಕೋರಿದರು. ಇದಕ್ಕೆ ಪ್ರತಿಕಿಯಿಸಿದ ಸದಸ್ಯರು ಕಡೂರು ಹಾಗೂ ಚಿಕ್ಕಮಗಳೂರು ಸ್ನಾತಕೋತ್ತರ ಕೇಂದ್ರಗಳಲ್ಲೂ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿಯ ಆರೋಗ್ಯ ಕೇಂದ್ರಗಳಿಗೂ ಹುದ್ದೆಗಳನ್ನು ಸೃಜಿಸಿ ಪರಿನಿಯಮವನ್ನು ರಚಿಸಲು ತಿಳಿಸಿದರು.

ನಿರ್ಣಯ: ಸುಧೀರ್ಘ ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ–1.15:** Statutes relating to upgradation posts of Draftsman as Senior Draftsman in Engineering division of Kuvempu University by promotion–2021 ಪರಿನಿಯಮದ ಅನುಮೋದನೆ ಕುರಿತು.

ಚರ್ಚೆ: ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದ ಡ್ರಾಫ್ಟ್‌ಮನ್ ಹುದ್ದೆಯನ್ನು ಬಡ್ತಿಯ ಮೂಲಕ ಹಿರಿಯ ಡ್ರಾಫ್ಟ್‌ಮನ್ ಹುದ್ದೆಗೆ ಮೇಲ್ದರ್ಜೇಗೇರಿಸುವ ಕುರಿತ ಪರಿನಿಯಮದ ಅನುಮೋದನೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಡ್ರಾಫ್ಟ್‌ಮನ್ ಹುದ್ದೆಯನ್ನು ಬಡ್ತಿಯ ಮೂಲಕ ಹಿರಿಯ ಡ್ರಾಫ್ಟ್‌ಮನ್ ಹುದ್ದೆಗೆ ಮೇಲ್ದರ್ಜೇಗೇರಿಸಲು ಅವಕಾಶವಿರುವುದಿಲ್ಲ ಅದರ ಬದಲು ಡ್ರಾಫ್ಟ್‌ಮನ್ ಹುದ್ದೆಯನ್ನು ಕಿರಿಯ ಇಂಜಿನಿಯರ್ ಹುದ್ದೆಗೆ ಮೇಲ್ದರ್ಜೇಗೇರಿಸಲು ಪರಿನಿಯಮ ರಚಿಸುವುದು ಸೂಕ್ತ ಎಂದರು.

ನಿರ್ಣಯ: ಚರ್ಚೆಯ ನಂತರ ಪರಿನಿಯಮವನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿ ತಿದ್ದುಪಡಿಗಳೊಂದಿಗೆ ಮಂಡಿಸುವಂತೆ ತಿಳಿಸಿ ಪರಿನಿಯಮ ರಚನಾ ಸ್ಥಾಯಿ ಸಮಿತಿಗೆ ವಹಿಸಲು ನಿರ್ಣಯಿಸಲಾಯಿತು.

**2021:ಎಸಿ–1.16:** "Statutes Relating to Recruitment of Assistant Executive Engineer in Kuvempu University by Promotion or Direct Recruitment – 2020" ಪರಿನಿಯಮದ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಪ್ರಸ್ತಾಪಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯನ್ನು ಬಡ್ತಿಯ ಮೂಲಕ ಅಥವಾ ನೇರ ನೇಮಕಾತಿ ಮಾಡಿಕೊಳ್ಳುವ ಕುರಿತ ಪರಿನಿಯಮದ ಅನುಮೋದನೆ ಕೋರಿದರು. ಇದಕ್ಕೆ ಆಕ್ಷೇಪಿಸಿದ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಒಂದೇ ಹುದ್ದೆ ಇರುವುದರಿಂದ ಬಡ್ತಿಗೆ ಅವಕಾಶವಿರುವುದಿಲ್ಲ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಈ ಪರಿನಿಯಮದ ಅನುಮೋದನೆಗೆ ತಮ್ಮ ಅಸಮ್ಮತಿ ಇರುವುದಾಗಿ ಮೌಖಿಕವಾಗಿ ತಿಳಿಸಿದರು. ಉಳಿದ ಸದಸ್ಯರು ಸಮ್ಮತಿ ಸೂಚಿಸಿದ್ದರಿಂದ ಪರಿನಿಯಮವನ್ನು ಅನುಮೋದಿಸಲಾಯಿತು.

**2021:ಎಸಿ–1.17:** ದಿನಾಂಕ:28-07-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳ ದೃಢೀಕರಣ.

**ನಿರ್ಣಯ:** ದಿನಾಂಕ:28-07-2020 ರಂದು ನಡೆದ ವಿದ್ಯಾವಿಷಯಕ ಪರಿಷತ್ ಅಸಾಮಾನ್ಯ (ಘಟಿಕೋತ್ಸವ) ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು

## ಹಣಕಾಸು ವಿಭಾಗ

**2021:ಎಸಿ–1.18:** 2019–20ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಪರಿಶೀಲನೆ ಮತ್ತು ಅನುಮೋದನೆ ಕುರಿತು.

**ಚರ್ಚೆ:** ಹಣಕಾಸು ಅಧಿಕಾರಿಗಳು 2019–20ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಸಭೆಗೆ ವಿವರಿಸಿ ಸಭೆಯ ಅನುಮೋದನೆ ಕೋರಿದರು. ಸದಸ್ಯರಾದ ಶ್ರೀ ಪವನ್‌ರವರು ವಾರ್ಷಿಕ ಲೆಕ್ಕವನ್ನು ಪರಿಶೀಲಿಸಿದಲ್ಲಿ ಖರ್ಚಾಗದೇ ಉಳಿಕೆ ಹಣವನ್ನು ಚಿಕ್ಕಮಗಳೂರಿನ ಸ್ನಾತಕೋತ್ತರ ಕೇಂದ್ರಕ್ಕೆ ವಿನಿಯೋಗಿಸಲು ಅವಕಾಶ ಕಲ್ಪಿಸುವಂತೆ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಹಣಕಾಸು ಅಧಿಕಾರಿಗಳು ಖರ್ಚಾಗದೇ ಉಳಿದ ಹಣದಲ್ಲಿ ಕೆಲವು ಹಣವು ಠೇವಣಿ ರೂಪದಲ್ಲಿದ್ದು ಅದನ್ನು ಇತರೆ ವೆಚ್ಚಗಳಿಗೆ ಬಳಸಲು ಅವಕಾಶವಿಲ್ಲವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 2019–20ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಗಳನ್ನು ಅನುಮೋದಿಸಲಾಯಿತು.

## ಕಾಲೇಜು ಅಭಿವೃದ್ಧಿ ಪರಿಷತ್

**2021:ಎಸಿ–1.19:** ಸಂಯೋಜನೆ ಪಡೆಯದೆ ಇರುವ ಪದವಿ ಕಾಲೇಜುಗಳ ಮಾನ್ಯತೆಯನ್ನು ರದ್ದುಗೊಳಿಸುವ ಬಗ್ಗೆ.

**ಚರ್ಚೆ:** ಕುಲಸಚಿವರು ಮಾತನಾಡುತ್ತಾ ಸಂಯೋಜನೆ ಪಡೆಯದೆ ಇರುವ ಪದವಿ ಕಾಲೇಜುಗಳ ಮಾನ್ಯತೆಯನ್ನು ರದ್ದುಗೊಳಿಸುವ ಕುರಿತು ವಿಷಯ ಪ್ರಸ್ತಾಪಿಸಿದರು. ಕಾಲೇಜು ಅಭಿವೃದ್ಧಿ ಪರಿಷತ್ ನಿರ್ದೇಶಕರಾದ ಪ್ರೊ ನಾಗರಾಜ ರವರು ಈ ಕುರಿತು ವಿವರಣೆ ನೀಡಿದರು.

**ನಿರ್ಣಯ:** ಚರ್ಚೆಯ ನಂತರ ಸಂಯೋಜನೆ ಪಡೆಯದೆ ಇರುವ ಐದು ಕಾಲೇಜುಗಳ ಮಾನ್ಯತೆ ರದ್ದುಗೊಳಿಸುವ ಕುರಿತು ಮಾನ್ಯ ಕುಲಪತಿಗಳನ್ನು ಭೇಟಿಯಾಗುವಂತೆ ಪ್ರಾಂಶುಪಾಲರಿಗೆ ತಿಳಿಸಲು ಹಾಗೂ ಇನ್ನೊಮ್ಮೆ ಪರಿಶೀಲಿಸಿ ಮುಂದಿನ ಸಭೆಗೆ ಮಂಡಿಸುವಂತೆ ತಿಳಿಸಿ ವಿಷಯವನ್ನು ಮುಂದೂಡಲಾಯಿತು.

## ಶೈಕ್ಷಣಿಕ ವಿಭಾಗ

**2021:ಎಸಿ–1.20:** ವಿಶ್ವವಿದ್ಯಾಲಯದ ಪಿ.ಜಿ. ಡಿಪ್ಲೋಮಾ ಇನ್ ಯೋಗ ಪದವಿ 2020–21ನೇ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಪಿ.ಜಿ. ಡಿಪ್ಲೋಮಾ ಇನ್ ಯೋಗ ಪದವಿ 2020–21ನೇ ಶೈಕ್ಷಣಿಕ ವೇಳಾಪಟ್ಟಿಯನ್ನು ಯಥಾವತ್ತಾಗಿ ಅನುಮೋದಿಸಲಾಯಿತು.

**2021:ಎಸಿ–1.21:** ವಿಶ್ವವಿದ್ಯಾಲಯದ ಬಿ.ಪಿ.ಇಡಿ. ಪದವಿಯ ಸೆಮಿಸ್ಟರ್ ಪದ್ಧತಿಯ 2020–21ನೇ ಶೈಕ್ಷಣಿಕ ಸಾಲಿನ ವೇಳಾಪಟ್ಟಿಯ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಬಿ.ಪಿ.ಇಡಿ. ಪದವಿಯ ಸೆಮಿಸ್ಟರ್ ಪದ್ಧತಿಯ 2020–21ನೇ ಶೈಕ್ಷಣಿಕ ಸಾಲಿನ ಯಥಾವತ್ತಾಗಿ ಅನುಮೋದಿಸಲಾಯಿತು.

**2021:ಎಸಿ–1.22:** ವಿಶ್ವವಿದ್ಯಾಲಯದ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ (ಎಂ.ಬಿ.ಎ ಮತ್ತು ಎಂ.ಸಿ.ಎ. ಕೋರ್ಸ್ ಹೊರತುಪಡಿಸಿ) ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಚಲಿಸುತ್ತಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ/ ಸ್ನಾತಕೋತ್ತರ ಡಿಪ್ಲೋಮಾ (ಎಂ.ಬಿ.ಎ ಮತ್ತು ಎಂ.ಸಿ.ಎ. ಕೋರ್ಸ್ ಹೊರತುಪಡಿಸಿ) ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಚಲಿಸುತ್ತಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2021:ಎಸಿ–1.23:** ವಿಶ್ವವಿದ್ಯಾಲಯದ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕ ಡಿಪ್ಲೋಮಾ ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಚಲಿಸುತ್ತಿರುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ 2020–21ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕ ಡಿಪ್ಲೋಮಾ ಪದವಿಗಳಿಗೆ ಸಂಬಂಧಿಸಿದ ಸಾಮಾನ್ಯ ಶೈಕ್ಷಣಿಕ ವೇಳಾಪಟ್ಟಿಯನ್ನು ಪರಿಚಲಿಸುತ್ತಿರುವ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

**2021:ಎಸಿ–1.24:** "ಪ್ರೊ. ಎಂ. ಕೃಷ್ಣಪ್ಪ ಕಮಂಡಲಗೊಂದಿ, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** "ಪ್ರೊ. ಎಂ. ಕೃಷ್ಣಪ್ಪ ಕಮಂಡಲಗೊಂದಿ, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಅನುಮತಿ ನೀಡಲು ತೀರ್ಮಾನಿಸಲಾಯಿತು.

**2021:ಎಸಿ–1.25:** "ದಿವಂಗತ ಹುಣಸಘಟ್ಟ ಮಲ್ಲಿಕಾರ್ಜುನಪ್ಪ, – ಎಕ್ಸ್. ಎಂ.ಎಲ್.ಎ., ತರೀಕೆರೆ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** "ದಿವಂಗತ ಹುಣಸಘಟ್ಟ ಮಲ್ಲಿಕಾರ್ಜುನಪ್ಪ, – ಎಕ್ಸ್. ಎಂ.ಎಲ್.ಎ., ತರೀಕೆರೆ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು. ವಿಶ್ವವಿದ್ಯಾಲಯದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿದ ಮೇಲ್ಕಂಡ ಮಹನೀಯರುಗಳಿಗೆ ವಿಶ್ವವಿದ್ಯಾಲಯದ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.

**2021:ಎಸಿ–1.25(ಎ):** 2018–19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾದ Dilpoma in Construction and Industrial Safety ಪದವಿಯ ಪಠ್ಯಕ್ರಮ ಮತ್ತು ವಿನಿಯಮವನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ 2018–19ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲಾದ Dilpoma in Construction and Industrial Safety ಪದವಿಯ ಪಠ್ಯಕ್ರಮ ಮತ್ತು ವಿನಿಯಮವನ್ನು ಸಭೆಯು ಅನುಮೋದಿಸಿತು.

**2021:ಎಸಿ–1.25(ಬಿ):** 2020–21ನೇ ಶೈಕ್ಷಣಿಕ ವರ್ಷದಿಂದ ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ವಿಜ್ಞಾನ ಘಟಕ ಕಾಲೇಜಿನಲ್ಲಿ ಹೊಸದಾಗಿ ಸ್ನಾತಕೋತ್ತರ ಭೌತಶಾಸ್ತ್ರ ಪದವಿ ಪ್ರಾರಂಭಿಸಿರುವ ಬಗ್ಗೆ ಸ್ಥಿರೀಕರಣಕ್ಕಾಗಿ.

**ನಿರ್ಣಯ:** 2020–21ನೇ ಶೈಕ್ಷಣಿಕ ವರ್ಷದಿಂದ ಕುವೆಂಪು ವಿಶ್ವವಿದ್ಯಾಲಯದ ಸಹ್ಯಾದ್ರಿ ವಿಜ್ಞಾನ ಘಟಕ ಕಾಲೇಜಿನಲ್ಲಿ ಹೊಸದಾಗಿ ಸ್ನಾತಕೋತ್ತರ ಭೌತಶಾಸ್ತ್ರ ಪದವಿ ಪ್ರಾರಂಭಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಸಭೆಯು ಸ್ಥಿರೀಕರಿಸಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2021:ಎಸಿ–1.25(ಸಿ):** ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಪದನಾಮದ ನಾಲ್ಕು ಹುದ್ದೆಗಳಲ್ಲಿ ಎರಡು ಹುದ್ದೆಗಳನ್ನು ಉನ್ನತ್ತೀಕರಿಸಲು ಕರಡು ಪರಿನಿಯಮವನ್ನು ಅನುಮೋದಿಸುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಪದನಾಮದ ನಾಲ್ಕು ಹುದ್ದೆಗಳಲ್ಲಿ ಎರಡು ಹುದ್ದೆಗಳನ್ನು ಉನ್ನತೀಕರಿಸಲು ಕರಡು ಪರಿನಿಯಮದ ಅನುಮೋದನೆ ಕೋರಿದರು. ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಮಾತನಾಡುತ್ತಾ ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ ಹುದ್ದೆಗಳನ್ನು ಉನ್ನತೀಕರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಸದಸ್ಯರಾದ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್‌ರವರು ಈ ಪರಿನಿಯಮದ ಅನುಮೋದನೆಗೆ ತಮ್ಮ ಅಸಮ್ಮತಿ ಇರುವುದಾಗಿ ಮೌಖಿಕವಾಗಿ ತಿಳಿಸಿದರು. ಉಳಿದ ಸದಸ್ಯರು ಸಮ್ಮತಿ ಸೂಚಿಸಿದ್ದರಿಂದ ಪರಿನಿಯಮವನ್ನು ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2021:ಎಸಿ–1.25(ಡಿ):** ಕೋವಿಡ್–19 ಪರಿಸ್ಥಿತಿಯಿಂದಾಗಿ ಮಧ್ಯಂತರ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲಾಗದ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಫಲಿತಾಂಶ ಪ್ರಕಟಿಸುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು(ಪರೀಕ್ಷಾಂಗ)ರವರು ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದನ್ವಯ ಪದವಿ ಮತ್ತು ಸ್ನಾತಕೋತ್ತರ ಪದವಿಯ ಅಂತಿಮ ಸೆಮಿಸ್ಟರ್ ಪರೀಕ್ಷೆಗಳನ್ನು ಮಾತ್ರ ನಡೆಸಿ ಫಲಿತಾಂಶ ಪ್ರಕಟಿಸಲಾಗಿದೆ. ಉಳಿದಂತೆ ಸರ್ಕಾರದ ಆದೇಶದ ಪ್ರಕಾರ ಫಾರ್ಮುಲಾ ಸಿದ್ದಪಡಿಸಿ ಅದರನ್ವಯ ಸ್ನಾತಕೋತ್ತರ ಪದವಿಯ ದ್ವಿತೀಯ ಸೆಮಿಸ್ಟರ್ ಹಾಗೂ ಪದವಿಯ ದ್ವಿತೀಯ ಮತ್ತು ನಾಲ್ಕನೇ ಸೆಮಿಸ್ಟರ್ ಫಲಿತಾಂಶವನ್ನು ಪ್ರಕಟಿಸಲಾಗಿದ್ದು ಈ ಕುರಿತು ಘಟನೋತ್ತರ ಅನುಮೋದನೆ ಕೋರಿದರು.

**ನಿರ್ಣಯ:** ಕೋವಿಡ್–19 ಪರಿಸ್ಥಿತಿಯಿಂದಾಗಿ ಮಧ್ಯಂತರ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲಾಗದ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಫಲಿತಾಂಶ ಪ್ರಕಟಿಸಿರುವುದನ್ನು ಸಭೆಯು ಅನುಮೋದಿಸಿತು.

**2021:ಎಸಿ–1.26: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು:**

1) ಸ್ನಾತಕೋತ್ತರ ಹಿಂದಿ ವಿಭಾಗವನ್ನು ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿಗೆ ಸ್ಥಳಾಂತರಿಸುವ ಕುರಿತು.

**ಚರ್ಚೆ:** ಮಾನ್ಯ ಕುಲಪತಿಗಳು ಮಾತನಾಡಿ ಪ್ರಸ್ತುತ ವಿಶ್ವವಿದ್ಯಾಲಯದ ಆವರಣದಲ್ಲಿರುವ ಸ್ನಾತಕೋತ್ತರ ಹಿಂದಿ ವಿಭಾಗದಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯು ಕ್ಷೀಣಿಸುತ್ತಿದ್ದು ಸದರಿ ವಿಭಾಗವನ್ನು ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನ ಆವರಣಕ್ಕೆ ಸ್ಥಳಾಂತರಿಸುವ ಮೂಲಕ ದಾಖಲಾತಿ ಹೆಚ್ಚಿಸಲು ಕ್ರಮ ಕೈಗೊಳ್ಳುವಂತೆ ಮನವಿಗಳು ಬಂದಿವೆ ಎಂದರು. ಸದಸ್ಯರಾದ ಪ್ರೊ.ಹೆಚ್.ಎಸ್.ಭೋಜ್ಯಾನಾಯ್ಕ್ ರವರು, ಸದರಿ ವಿಭಾಗವನ್ನು ಶಿವಮೊಗ್ಗ ಸಹ್ಯಾದ್ರಿ ಕಲಾ ಕಾಲೇಜಿಗೆ ಸ್ಥಳಾಂತರಿಸಿದಲ್ಲಿ ಪ್ರಾಂಶುಪಾಲರ ಆಧೀನದಲ್ಲಿ ಕಾರ್ಯ ನಿರ್ವಹಿಸಲು ತಿಳಿಸಬಹುದು ಎಂದರು. ಇದಕ್ಕೆ ಸದಸ್ಯರುಗಳಾದ ಪ್ರೊ.ರೇಚಲ್ ಕುರಿಯನ್ ಹಾಗೂ ಡಾ.ಗೀತಾ.ಸಿ ಇವರುಗಳು ಆಕ್ಷೇಪಿಸಿ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಾಪಕರು ಸ್ನಾತಕ ಕಾಲೇಜಿನ ಪ್ರಾಂಶುಪಾಲರ ಅಧೀನದಲ್ಲಿ ಕಾರ್ಯನಿರ್ವಹಿಸುವುದು ಸಾಧುವಲ್ಲವೆಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ ಈ ವಿಷಯದ ಕುರಿತು ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪರಿಶೀಲಿಸಲು ತೀರ್ಮಾನಿಸಲಾಯಿತು.

ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಇನ್ನು ಹೆಚ್ಚಿನ ಹೊಸ ಹೊಸ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳನ್ನು ಹೊಸದಾಗಿ ಪ್ರಾರಂಭಿಸುವ ಕುರಿತು ಸದಸ್ಯರುಗಳು ತಮ್ಮ ಸಲಹೆ ಸೂಚನೆಗಳನ್ನು ಲಿಖಿತವಾಗಿ ಕಳುಹಿಸಿಕೊಡುವಂತೆ ಸದಸ್ಯರಲ್ಲಿ ಮನವಿ ಮಾಡಿದರು.

ಸದಸ್ಯರಾದ ಶ್ರೀ ಅನಿಲ್ ಕುಮಾರ್ ಆರ್ ಇವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿರುವ ಅಂಬೇಡ್ಕರ್ ಅಧ್ಯಯನ ಕೇಂದ್ರದಿಂದ ಭಾರತದ ಸಂವಿಧಾನದ ಕುರಿತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುವುದು ಸೂಕ್ತವೆಂದರು. ಇದಕ್ಕೆ ಸಭೆಯು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ, ಮಾನ್ಯ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದರು.

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/–
ಕುಲಪತಿಗಳು